ಶ್ರೀ ಎಂ.ಜಿ. ಮುಳೆ :— ಮಾನ್ಯ ಅಧ್ಯಕ್ಷರೇ, ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದರೆ ಇನ್‌ಕಮ್ ಕ್ರೈಟೀರಿಯಾ ಹೇಗೆ ಬರುತ್ತದೆ? ಟೌನ್ ಪ್ಲಾನಿಂಗ್ ಅಥಾರಿಟಿಯವರು ಆದಾಯ ಕ್ರೋಢೀಕರಿಸುವುದಿಲ್ಲ. ಅವರು ಪ್ಲಾನಿಂಗ್ ಮಾತ್ರ ಮಾಡುತ್ತಾರೆ. ಅವರದ್ದು ಡೆವಲಪ್‌ಮೆಂಟ್ ಆಕ್ಟೀವಿಟಿ ಏನೂ ಇಲ್ಲ. ಅಲ್ಲಿನ ಜನಸಂಖ್ಯೆ ಈಗ 60 ಸಾವಿರ ಆಗಿದೆ. ಬೀದರ್ ಬಿಟ್ಟ ಮೇಲೆ ನೆಕ್ಸ್ಟ್ ಬಸವಕಲ್ಯಾಣ ಅದು ರೆವಿನ್ಯೂ ಸಬ್ ಡಿವಿಜನ್ ಇದೆ. ಆದ್ದರಿಂದ ಅಲ್ಲಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯ ಅವಶ್ಯಕತೆ ಇದೆಯೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿರತಕ್ಕಂಥ ಜನಸಂಖ್ಯೆ 1991ರ ಜನಗಣತಿ ಆಧಾರದ್ದು. ಈಗ 2001ರ ಜನಗಣತಿಯ ಜನಸಂಖ್ಯೆ ಬಂದ ಮೇಲೆ ಅದನ್ನು ನೋಡಿಕೊಂಡು ನಾವು ಈ ವಿಷಯದ ಬಗ್ಗೆ ಪರಿಶೀಲನೆ ಮಾಡೋಣ.

ರಾಜ್ಯದ ಮಹಾ ನಗರಪಾಲಿಕೆ ಹಾಗೂ ನಗರಸಭೆಗಳ ಕಂಪ್ಯೂಟರೀಕರಣ

295(3516) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಮಹಾ ನಗರಪಾಲಿಕೆಗಳು ಮತ್ತು ನಗರಸಭೆಗಳ ನ್ನು ಕಂಪ್ಯೂಟರೀಕರಣಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಆ) ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆಯು ರಾಜ್ಯ ಸರ್ಕಾರದ ನೀತಿಯಾದುದರಿಂದ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಕಂಪ್ಯೂಟರೀಕರಣಗೊಳಿಸಬೇಕಾಗಿದ್ದು ಈ ಹಿನ್ನಲೆಯಲ್ಲಿ ನಗರಾಭಿವೃದ್ಧಿ ಸಚಿವಾಲಯ ಯಾವ ಪ್ರಗತಿಯನ್ನು ಸಾಧಿಸಿದೆ?

ನಗರಾಭಿವೃದ್ಧಿ ಸಚಿವರ ಪರವಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ಎಲ್ಲಾ 5 ನಗರಪಾಲಿಕೆಗಳನ್ನು ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ. ಇದಕ್ಕಾಗಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಗೆ ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಸಾಫ್ಟ್‌ವೇರ್ ಅಭಿವೃಧಿಯು ಕಾರ್ಯಗತಿಯಲ್ಲಿದೆ.

ಪ್ರಸ್ತುತ ನಗರಸಭೆಗಳನ್ನು ಕಂಪ್ಯೂಟರೀಕರಣಗೊಳಿಸುವ ಪ್ರಸ್ತಾವನೆಯು ಸರ್ಕಾರದಲ್ಲಿರುತ್ತದೆ. ಆದಾಗ್ಯೂ ಪೌರಾಡಳಿತ ನಿರ್ದೇಶನಾಲಯವು ಈಗಾಗಲೇ ಕಂಪ್ಯೂಟರೀಕರಣಗೊಂಡಿದ್ದು ಎಲ್ಲಾ ನಗರಸಭೆ : ಪುರಸಭೆಗಳ ಮಾಹಿತಿಗಳನ್ನು ಕ್ರೋಢೀಕರಿಸಲಾಗಿದೆ.

ಆ) ರಾಜ್ಯದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಕೆಲವು ಪ್ರಾಧಿಕಾರಗಳು ಈಗಾಗಲೇ ಕಂಪ್ಯೂಟರೀಕರಣಗೊಳಿಸಿದ್ದು, ಉಳಿದ ಪ್ರಾಧಿಕಾರಗಳು ಕಂಪ್ಯೂಟರ್‌ಗಳನ್ನು ಅಳವಡಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ರಾಜ್ಯದ ಮಹಾನಗರಪಾಲಿಕೆಗಳು ಮತ್ತು ನಗರಸಭೆಗಳನ್ನು ಕಂಪ್ಯೂಟರೀಕರಣಗೊಳಿಸಲಾಗಿದೆಯೇ ಎಂದು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಐದು ನಗರಪಾಲಿಕೆಗಳಲ್ಲಿ ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಗೆ ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಸಹಾ ಹೇಳಿದ್ದಾರೆ. ನನ್ನ ಪ್ರಶ್ನೆ ಇಷ್ಟೆ. ಕಂಪ್ಯೂಟರೀಕರಣವೆಂದರೆ ಕಂಪ್ಯೂಟರ್ ಕೊಂಡುಕೊಳ್ಳುವುದಲ್ಲ. ಜನರಿಗೆ ಕಂಪ್ಯೂಟರ್ ಸೇವಾ ಸೌಲಭ್ಯವನ್ನು ಪ್ರಾರಂಭಿಸಲು ಏನಾದರೂ ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸಿದ್ದೀರಾ? ರಾಜ್ಯದ ಐದು ಮಹಾನಗರಪಾಲಿಕೆಗಳಲ್ಲಿ ಜನರಿಗೆ ಕಂಪ್ಯೂಟರ್ ಸೇವಾ ಸೌಲಭ್ಯವನ್ನು ಯಾವಾಗ ಒದಗಿಸುತ್ತೀರಿ? ನೂರು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ ಎಂದು ಹೇಳಿದ್ದೀರಿ. ಯಾವ ಯಾವ ನಗರಪಾಲಿಕೆಗೆಷ್ಟು ಹಣ? ಯಾವ ಕಾರ್ಯಕ್ಕಾಗಿ ಈ ಹಣವನ್ನು ಬಿಡುಗಡೆ ಗೊಳಿಸಲಾಗಿದೆ ಎಂದು ನನ್ನ ಪ್ರಶ್ನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಐದು ಮಹಾನಗರ ಪಾಲಿಕೆಗಳಲ್ಲಿ ಈ ಕಂಪ್ಯೂಟರೀಕರಣ ಮಾಡಬೇಕೆನ್ನುವ ಯೋಜನೆ ಇದೆ. ಇದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಿಕೊಟ್ಟಿದೆ. ಬೆಂಗಳೂರು ನಗರ ಒಂದು ಬಿಟ್ಟರೆ ಉಳಿದ ಐದು ಮಹಾನಗರ ಪಾಲಿಕೆಗಳಲ್ಲಿ ಇದು ಇನ್ನೂ ಪ್ರಾರಂಭವಾಗಬೇಕು. ಒಂದು ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಇನ್ನುಳಿದ 211 ಮುನಿಸಿಪಾಲಿಟಿಗಳಲ್ಲಿ ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಸುಮಾರು 9 ಕೋಟಿ ರೂಪಾಯಿಗಳು ಬೇಕು. ಆದರಲ್ಲಿ ಕೇವಲ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದೆ. ಆ ಕೆಲಸ ಕೂಡ ಇನ್ನೂ ಪ್ರಾರಂಭವಾಗಿಲ್ಲ. ನಮ್ಮ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಮಲ್ಲಿಕಾರ್ಜುನ್ ಅವರಿಗೆ ಈ ಪ್ರಶ್ನೆ ಬರುತ್ತದೆ. 211 ಮುನಿಸಿಪಾಲಿಟಿಗಳಲ್ಲಿ ಯಾವ ರೀತಿಯಾಗಿ ಮಾಡುತ್ತಾರೆ ಎನ್ನುವುದನ್ನು ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಬರುತ್ತದೆ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೇ, ಮಾಹಿತಿ ತಂತ್ರಜ್ಞಾನ ಅಳವಡಿಕೆ ಸರ್ಕಾರದ ನೀತಿಯಾಗಿರುವುದರಿಂದಾಗಿ ಈ ನೀತಿಯನ್ನು ಜಾರಿಗೆ ತರುವಲ್ಲಿ ಆಗಿಂದಾಗ್ಗೆ ನೀವು ಪ್ರಗತಿ ಪರಿಶೀಲನಾ ಸಭೆಗಳನ್ನು ಮಾಡುತ್ತಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ಹಾಗೆ ಇನ್ನೂ ಅದು ಪ್ರಾರಂಭವೇ ಆಗಿಲ್ಲ. ನಾವು ಒಪ್ಪಿಕೊಂಡಿದ್ದೇವಲ್ಲಾ. ಏಕೆಂದರೆ 5 ಮಹಾನಗರಪಾಲಿಕೆಗಳಲ್ಲಿ ಇದನ್ನು ಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಆ

ನೀತಿಯನ್ನು ಒಪ್ಪಿಕೊಂಡೇ ಇವತ್ತು ಅದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಆ ಕೆಲಸವನ್ನು ಮುಂದಿನ ದಿವಸಗಳಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೇನೆ.

ಪ್ರಶ್ನೆ ಸಂಖ್ಯೆ : 298 (2468)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹಯಾತ್ ಖಾನ್ :— ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯೇ ಬೇರೆ. ಸರ್ಕಾರದವರು ಉತ್ತರ ಕೊಟ್ಟಿರುವುದೇ ಬೇರೆ. ಇದರ ಬಗ್ಗೆ ಅವರು ಇಂಟಿಮೇಷನನ್ನು ಕೊಟ್ಟಾಗ ನಾನು ಉಪಕಾರ್ಯದರ್ಶಿಗಳಿಗೆ ಹೋಗಿ ಹೇಳಿದ್ದೇನೆ. ನಾನು ಹುಬ್ಬಳ್ಳಿ ಧಾರವಾಡ ಮಹಾ ನಗರಪಾಲಿಕೆಯನ್ನು ಸಂಯುಕ್ತೀಕರಿಸುವ ಬಗ್ಗೆ ಕೇಳಿದರೆ ಇವರು ಕಟ್ಟಡದ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ ಪ್ರಶ್ನೆಗೆ ಉತ್ತರ ಬೇಕು. ನಾನು ಹೋಗಿ ಇಂಟಿಮೇಷನ್ ಕೊಟ್ಟರೂ ಸಹಿತ ಅವರು ತಿಳಿದುಕೊಳ್ಳುವುದಕ್ಕೆ ತಯಾರಾಗಿಲ್ಲ. ತಾವು ಈ ಪ್ರಶ್ನೆಯನ್ನು ಪೋಸ್ಟ್‌ಪೋನ್ ಮಾಡಿ.

ಅಧ್ಯಕ್ಷರು :— ಹಾಗಾದರೆ ಈ ಪ್ರಶ್ನೆಯನ್ನು ಪೋಸ್ಟ್‌ಪೋನ್ ಮಾಡುತ್ತೇನೆ. ನೀವೇ ಹೇಳುತ್ತಿದ್ದೀರಿ. ನಾನು ಕೇಳಿದ ಪ್ರಶ್ನೆಯೇ ಬೇರೆ. ಅವರು ಕೊಟ್ಟಿರುವ ಉತ್ತರ ಬೇರೆ ಎಂದು. ಆಯಿತು ಮುಂದಿನ ವಾರ ಇದನ್ನು ತೆಗೆದುಕೊಳ್ಳೋಣ.

ಮೈಸೂರು ನಗರದ ಪಡುವಾರಹಳ್ಳಿ, ಗೋಕುಲಂ, ಆಟೋನಗರದಲ್ಲಿ ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರು ಮಾಡುವ ಬಗ್ಗೆ

300 (3620) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಮೈಸೂರು ನಗರದಲ್ಲಿ ಪಡುವಾರಹಳ್ಳಿ, ಗೋಕುಲ ಮತ್ತು ಆಟೋನಗರ ಈ 3 ಸ್ಥಳಗಳಲ್ಲಿ ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ಮಾಡಲು ನಿರ್ಧಾರಿಸಲಾಗಿದೆಯೇ;

ಆ) ಈ ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರು ಮಾಡಲು ಯಾವ ಏಜೆನ್ಸಿಗೆ ನೀಡಲಾಗಿದೆ;

ಇ) ಏಜೆನ್ಸಿಯವರಿಗೆ ಎಷ್ಟು ಹಣವನ್ನು ಕೊಡಲು ನಿರ್ಧರಿಸಲಾಗಿತ್ತು;

ಈ) ಲೇಔಟ್ ಪ್ಲಾನ್ ಮತ್ತು ಪ್ರಾಜೆಕ್ಟ್ ಎಸ್ಟಿಮೇಟ್ ತಯಾರುಮಾಡಿ ಪ್ರಾಧಿಕಾರಕ್ಕೆ ಸಲ್ಲಿಸಿರುವರೆ;